# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103**

**ದಿನಾಂಕ: 19.05.2020 ರಂದು ಬೆಳಗ್ಗೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮನಕೂರು ಇಲ್ಲಿದ ನಡೆದ 2019-20ನೇ ಸಾಲಿನ ಮೂರನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಶ್ರೀ ಪುರುಷೋತ್ತಮ ರಾವ್ ಸಿಂಧ್ಯ | ಸದಸ್ಯರು |
| 4. | ಶ್ರೀ ನರಸಿಂಹಮೂರ್ತಿ ಸಿ.ಎನ್. | ಸದಸ್ಯರು |
| 5. | ಶ್ರೀ ನಾರಾಯಣ ಎಂ. | ಸದಸ್ಯರು |
| 6. | ಡಾ. ಗುರುಬಸಪ್ಪ ಹೆಚ್.ಡಿ.<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಡಾ. ಹೆಚ್. ಎಂ. ಗಂಗಾಧರಯ್ಯ ರಸ್ತೆ, ಸರಸ್ವತಿ ಪುರಂ, ಮರಳೂರು ಪೋಸ್ಟ್, ತುಮಕೂರು-572105. | ಸದಸ್ಯರು |
| 7. | ಪ್ರೊ. ಶಿವಾನಂದಯ್ಯ ಎನ್.ಪಿ.,<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು. | ಸದಸ್ಯರು |
| 8. | ಡಾ. ನರಸಿಂಹನ್ ಎಮ್.ಎಸ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್. | ಸದಸ್ಯರು |
| 9. | ಪ್ರೊ. ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. | ಸದಸ್ಯರು |
| 10. | ಡಾ. ಆನಂದ ಕುಮಾರಿ,<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 11. | ಡಾ. ಬಾಲಪ್ಪ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ. | ಸದಸ್ಯರು |
| 12. | ಡಾ. ಪಿ. ರಾಜಾರೆಡ್ಡಿ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು. | ಸದಸ್ಯರು |
| 13. | ಡಾ. ಎಸ್.ಬಿ. ಬಸವರೆಡ್ಡಿ,<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು. | ಸದಸ್ಯರು |
| 14. | ಪ್ರೊ. ಎಲ್.ಪಿ. ರಾಜು., ಪ್ರಾಧ್ಯಾಪಕರು | ಸದಸ್ಯರು |
| 15. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ., ಪ್ರಾಧ್ಯಾಪಕರು | ಸದಸ್ಯರು |

| | | |
|---|---|---|
| 16. | ಪ್ರೊ. ಬಸವರಾಜ ಜಿ., ಪ್ರಾಧ್ಯಾಪಕರು | ಸದಸ್ಯರು |
| 17. | ಪ್ರೊ. ವಿಲಾಸ್ ಎಂ., ಕಡ್ರೊಲ್ಕರ್, ಪ್ರಾಧ್ಯಾಪಕರು | ಸದಸ್ಯರು |
| 18. | ಪ್ರೊ. ಮೀನಾಕ್ಷಿ ಖಂಡೀಮಠ್, ಪ್ರಾಧ್ಯಾಪಕರು | |
| 19. | ಡೀನರು, ಕಲಾ ನಿಕಾಯ | ಸದಸ್ಯರು |
| 20. | ಡೀನರು, ಕಾನೂನು ನಿಕಾಯ | ಸದಸ್ಯರು |
| 21. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 22. | ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ | ಸದಸ್ಯರು |
| 23. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 24. | ಪ್ರೊ. ಪಿ. ಪರಮಶಿವಯ್ಯ<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 25. | ಡಾ. ಕೇಶವ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 26. | ಡಾ. ಬಿ.ಟಿ. ಸಂಪತ್ ಕುಮಾರ್., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 27. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 28. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 29. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

### ಹಾಜರಾಗದ ಸದಸ್ಯರು

| | | |
|---|---|---|
| 1 | ಶ್ರೀ ಕಾಂತರಾಜ್ (ಬಿಎಂಎಲ್), ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 2 | ಪ್ರೊ. ಹೆಚ್.ಎನ್. ವಿಜಯೇಂದ್ರ,<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಮಹಾ ವಿದ್ಯಾಲಯ, ತುಮಕೂರು-05 | ಸದಸ್ಯರು |
| 3 | ಪ್ರೊ. ನಾರಾಯಣ ಕೆ.ಆರ್.,<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ. (ಸದರಿಯವರು ಅನ್ಯ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜಿಗೆ ವರ್ಗಾವಣೆಗೊಂಡಿರುತ್ತಾರೆ) | ಸದಸ್ಯರು |
| 4 | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 5 | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:19.05.2020ರ ಮಂಗಳವಾರ ಬೆಳಗ್ಗೆ 11:00 ಕ್ಕೆ ನಡೆದ 2019-20ನೇ ಸಾಲಿನ ಮೂರನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ಹೊಸದಾಗಿ ವಿದ್ಯಾವಿಷಯಕ ಪರಿಷತ್‌ಗೆ ನೇಮಕಗೊಂಡಿರುವ ಡೀನರುಗಳು ಹಾಗೂ ಪ್ರಾಧ್ಯಾಪಕರುಗಳನ್ನು ಮಾನ್ಯ ಕುಲಪತಿಗಳು ಪರಿಚಯಿಸಿದರು ಹಾಗೂ ಸ್ವಾಗತಿಸಿದರು. ಕೋವಿಡ್-2019ರ ಹಿನ್ನಲೆಯಲ್ಲಿ ಪ್ರಸ್ತುತ ಸಭೆಯನ್ನು ಸಾಮಾಜಿಕ ಅಂತರವನ್ನು ಕಾಯ್ದಿರಿಸಿಕೊಂಡು ನಡೆಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು ಸರ್ಕಾರದ ಹಾಗೂ ಯು.ಜಿ.ಸಿ. ಮಾರ್ಗಸೂಚಿಯನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ತರಗತಿಗಳನ್ನು, ಪ್ರೊಜೆಕ್ಟ್, ಅಸೈನ್‌ಮೆಂಟ್ ಹಾಗೂ ಯುನಿಟ್ ಟೆಸ್ಟ್‌ಗಳನ್ನು ನಡೆಸುವ ಮುಖಾಂತರ ಶೈಕ್ಷಣಿಕವಾಗಿ ಯಾವುದೇ ತೊಡಕುಗಳಾಗದಂತೆ ಎಲ್ಲಾ ಅಧ್ಯಾಪಕರು ಅಗತ್ಯ ಕ್ರಮವನ್ನು ವಹಿಸಿರುತ್ತಾರೆ ಎಂದು ತಿಳಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 15.10.2019 ರಂದು ನಡೆದ ದ್ವಿತೀಯ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಹಾಗೂ ದಿನಾಂಕ 19.02.2020ರ ರಂದು ನಡೆದ ಪ್ರಥಮ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳನ್ನು ದೃಢೀಕರಿಸಲಾಯಿತು. | | | |
| ಶೈಕ್ಷಣಿಕ ವಿಭಾಗ | | | |
| 01 | 2019-20.ಸಾ.ವಿ.ವಿ.ಪ.03 ಶೈ.ವಿಭಾಗ-01 | ಸ್ನಾತಕ ಪದವಿಗಳಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಅನುಮೋದಿಸುವ ಕುರಿತು. | ಸ್ನಾತಕ ಪದವಿಗಳಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಢೆ ವಿಷಯದ ಮುಕ್ತ ಆಯ್ಕೆ ಪತ್ರಿಕೆ Physical Education and Sports ಪಠ್ಯಕ್ರಮವನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಜಾರಿಗೊಳಿಸಲು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 02 | 2019-20.ಸಾ.ವಿ.ವಿ.ಪ.03 ಶೈ.ವಿಭಾಗ-02 | Concession for the wards of Kashmiri Migrants and Kashmiri Pandit/ Kashmiri Hindu Families (Non-Migrants) Living in Kashmir Valley for admission in Higher Educational Institutions-Regarding. ಕುರಿತು ಹೊರಡಿಸಿರುವ ಅಂಶಗಳನ್ನು ಅನುಷ್ಠಾನಗೊಳಿಸುವ ಬಗ್ಗೆ. | Concession for the wards of Kashmiri Migrants and Kashmiri Pandit/ Kashmiri Hindu Families (Non-Migrants) Living in Kashmir Valley for admission in Higher Educational Institutions-Regarding. ಕುರಿತು MHRD ಹೊರಡಿಸಿರುವ ಅಂಶಗಳನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಯ ವೇಳೆ ಅನುಷ್ಠಾನಗೊಳಿಸಲು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 03 | 2019-20.ಸಾ.ವಿ.ವಿ.ಪ.03 ಶೈ.ವಿಭಾಗ-03 | ಒಂದೇ ಸ್ಥಳದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಕಾಲೇಜು ಬದಲಾವಣೆಯ ಅವಕಾಶ ನೀಡಬಾರದೆಂಬ ಮನವಿಯ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ದಿನಾಂಕ 25.06.2010 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ನಿಗಧಿಪಡಿಸಿರುವ 07 ನಿಬಂದನೆಗಳ ಜೊತೆಗೆ ಒಂದೇ ಸ್ಥಳದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆಯ |

| | | | |
|---|---|---|---|
| | | | ಅವಕಾಶವನ್ನು ನೀಡುವ ಬಗ್ಗೆ ವಿದ್ಯಾರ್ಥಿಗಳ ವಾಸ್ತವಿಕ ಪರಿಸ್ಥಿತಿಯನ್ನು ಡೀನರ ಸಮಿತಿಯು ಪರಿಶೀಲಿಸಿ ಶಿಫಾರಸ್ಸಿನನ್ವಯ ಅಗತ್ಯ ಕ್ರಮ ವಹಿಸುವ ನಿಬಂದನೆಯನ್ನು ಸೇರಿಸಲು ಒಪ್ಪಬಹುದುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 04 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–04 | ಬಿ.ವೋಕ್ ಕೋರ್ಸಿನ ಪರಿಷ್ಕೃತ ವಿನಿಯಮವನ್ನು ಅನುಮೋದಿಸುವ ಕುರಿತು. | ಬಿ.ವೋಕ್ ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪದವಿ ಪ್ರಮಾಣ ಪತ್ರ ವಿತರಣೆ ಹಾಗೂ ರ್‍ಯಾಂಕ್ ಘೋಷಣೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಒಪ್ಪಬಹುದೆಂದು ಹಾಗೂ ಬಿ.ವೋಕ್ ಪದವಿಯ ಪರಿಷ್ಕೃತ ವಿನಿಯಮವನ್ನು ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ಒಪ್ಪಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 05 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–05 | ಸ್ನಾತಕ ಸೈಬರ್ ಲಾ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಅನುಮೋದಿಸುವ ಕುರಿತು. | ಸ್ನಾತಕ ಸೈಬರ್ ಲಾ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಸಿದ್ದಪಡಿಸಲು ರಚನೆಯಾಗಿರುವ ಅಧ್ಯಯನ ಮಂಡಳಿಯನ್ನು ಸ್ಥಿರೀಕರಿಸಿ, 2020–21ನೇ ಸಾಲಿನಿಂದ ಸ್ನಾತಕ ಸೈಬರ್ ಲಾ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಜಾರಿಗೊಳಿಸಲು ಒಪ್ಪಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 06 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–06 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕ್ರಮವನ್ನು ಸ್ಥಿರೀಕರಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 07 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–07 | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Departmental Council) ರಚಿಸಿರುವ ಸಂಬಂಧ ಸ್ಥಿರೀಕರಣದ ಕುರಿತು. | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Departmental Council) ರಚಿಸಿರುವ ಕ್ರಮವನ್ನು ಸ್ಥಿರೀಕರಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 08 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–08 | ಸ್ನಾತಕೋತ್ತರ ಎಂ.ಎಸ್ಸಿ. ಮನಃಶಾಸ್ತ್ರ ಪಠ್ಯಕ್ರಮದ ಅಧಿಸೂಚನೆ ಹಾಗೂ ಸಿಬಿಸಿಎಸ್ ವಿನಿಯಮದಲ್ಲಿ ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆ ಪಡೆಯುವ ಕುರಿತು. | ಸ್ನಾತಕೋತ್ತರ ಎಂ.ಎಸ್ಸಿ. ಮನಃಶಾಸ್ತ್ರ ಪಠ್ಯಕ್ರಮವನ್ನು ಅನುಮೋದಿಸಿ, ಸಿಬಿಸಿಎಸ್ ವಿನಿಯಮದಲ್ಲಿ ತಿದ್ದುಪಡಿ (ಎಂ.ಎ. ಮನಃಶಾಸ್ತ್ರ ಬದಲು ಎಂ.ಎಸ್ಸಿ. ಮನಃಶಾಸ್ತ್ರ) ಮಾಡಿ ಸರ್ಕಾರದ ಅನುಮೋದನೆ ಪಡೆಯಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 09 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–09 | ವಿಶ್ವವಿದ್ಯಾನಿಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕ್ರಮವನ್ನು ಸ್ಥಿರೀಕರಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| 10 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–10 | ಸ್ನಾತಕೋತ್ತರ ಪದವಿಗಳ ಪ್ರವೇಶಾತಿಯಲ್ಲಿ Out of University ಕೋಟಾದಲ್ಲಿರುವ ಸೀಟುಗಳನ್ನು ಹಾಲಿ ಇರುವುದಕ್ಕಿಂತ ಶೇ.10 ರವರೆಗೆ ಹೆಚ್ಚಿಸುವ ಕುರಿತು. | ಸ್ನಾತಕೋತ್ತರ ಪದವಿಗಳ ಪ್ರವೇಶಾತಿಯಲ್ಲಿ Out of University ಕೋಟಾದಲ್ಲಿರುವ ಸೀಟುಗಳನ್ನು ಹಾಲಿ ಇರುವುದಕ್ಕಿಂತ ಶೇ.10 ರವರೆಗೆ ಹೆಚ್ಚಿಸಲು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 11 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–11 | ಸ್ನಾತಕೋತ್ತರ ಕೋರ್ಸ್‌ಗಳಲ್ಲಿ MOOC ನ್ನು ಅಳವಡಿಸಿ ಸಿದ್ದಪಡಿಸಿರುವ ಪರಿಷ್ಕೃತ ಸಿ.ಬಿ.ಸಿ.ಎಸ್. ವಿನಿಯಮದ ಅನುಮೋದನೆ ಕುರಿತು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವಿನಿಯಮದಲ್ಲಿ ಮಾಡಿರುವ ಮಾರ್ಪಾಡುಗಳ ಬಗ್ಗೆ ಹಾಗೂ MOOC ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ವಿಶ್ವವಿದ್ಯಾನಿಲಯದ MOOC ಸಂಯೋಜಕರು ವಿದ್ಯಾವಿಷಯಕ ಪರಿಷತ್ ಸಭೆಗೆ ನೀಡಿದರು. ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ MOOC ನ್ನು ಅಳವಡಿಸಿ ಸಿದ್ದಪಡಿಸಿರುವ ಪರಿಷ್ಕೃತ ಸಿ.ಬಿ.ಸಿ.ಎಸ್. ವಿನಿಯಮವನ್ನು ಅನುಮೋದಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲು ಒಪ್ಪಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಕಾಲೇಜು ಅಭಿವೃದ್ಧಿ ಪರಿಷತ್** | | | |
| 12 | 2019–20.ಸಾ.ವಿ.ವಿ.ಪ.03 ಕಾ.ಅ.ಪ.–01 | ಸರ್ಕಾರದ ಸೂಚನೆಯಂತೆ ಏಕರೂಪ ಸಂಯೋಜನೆ ಪರಿನಿಯಮಾವಳಿಯನ್ನು ರಚಿಸಿರುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯವು ಈಗಾಗಲೇ ಸಿದ್ದಪಡಿಸಿರುವ ಸಂಯೋಜನೆ ಪರಿನಿಯಮಾವಳಿಯನ್ನು ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ಒಪ್ಪಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಪರೀಕ್ಷಾ ವಿಭಾಗ** | | | |
| 13 | 2019–20..ಸಾ.ವಿ.ವಿ.ಪ.03 ಪರೀಕ್ಷಾ ವಿಭಾಗ–01 | ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡವಳಿಯ ಕುರಿತು. | ಸದರಿ ವಿಷಯದ ಬಗ್ಗೆ ಕುಲಸಚಿವರು (ಪರೀಕ್ಷಾಂಗ) ರವರು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳಿಗೆ ವಿಚಾರಣಾ ಸಮಿತಿಯು ಕೈಗೊಂಡಿರುವ ಕ್ರಮವನ್ನು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ವಿಚಾರಣಾ ಸಮಿತಿಯ ನಡಾವಳಿಯಲ್ಲಿನ ಅಂಶವನ್ನು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. ಮುಂದುವರೆದು, ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಾಗಲೀ ಅಥವಾ ಬೇರೆ ಯಾರೇ ಆಗಲೀ ಭಾಗವಹಿಸದಂತೆ ಅಗತ್ಯ ಕ್ರಮ ವಹಿಸುವಂತೆ |

| | | | |
|---|---|---|---|
| | | | ಎಲ್ಲಾ ಪ್ರಾಂಶುಪಾಲರ ಹಾಗೂ ಅಧ್ಯಕ್ಷರ ಗಮನಕ್ಕೆ ತರುವಂತೆ ಸಭೆಯಲ್ಲಿ ಹಾಜರಾಗಿದ್ದ ಪ್ರಾಂಶುಪಾಲರಿಗೆ ಹಾಗೂ ಪ್ರಾಧ್ಯಾಪಕರಿಗೆ ಮಾನ್ಯ ಕುಲಪತಿಗಳು ತಿಳಿಸಿದರು. |
| **ಶೈಕ್ಷಣಿಕ ವಿಭಾಗ** | | | |
| 14 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–12 | ತಿಪಟೂರಿನಲಿ PG Diploma in Coconut Plantation Management & Processing ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು. | PG Diploma in Coconut Plantation Management & Processing ಕೋರ್ಸ್‌ಗೆ ಸಂಬಂಧಿಸಿದಂತೆ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಲ್ಲಿ ಸದರಿ ಕೋರ್ಸ್‌ನ್ನು ಹಾಗೂ ಪಿ.ಜಿ. ಸೆಂಟರ್‌ನಲ್ಲಿರುವ ಎಂ.ಕಾಂ. ಕೋರ್ಸ್‌ನ್ನು ಮೂಲಭೂತ ಸೌಕರ್ಯ ಹಾಗೂ ಆಯವ್ಯಯಗಳನ್ನು ಪರಿಶೀಲಿಸಿ, ತಿಪಟೂರಿನ ಎ.ಪಿ.ಎಂ.ಸಿ. ಆವರಣದ ಕಟ್ಟಡದಲ್ಲಿ ಪ್ರಾರಂಭಿಸಲು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಹೆಚ್ಚುವರಿ ಕಾರ್ಯಸೂಚಿಗಳು** | | | |
| **ಶೈಕ್ಷಣಿಕ ವಿಭಾಗ** | | | |
| 15 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–13 | ಪದವಿ ಶೈಕ್ಷಣಿಕ ಹಂತದಲ್ಲಿ ಜಾನಪದ ವಿಷಯವನ್ನು ಐಚ್ಛಿಕವಾಗಿ ಅಳವಡಿಸುವ ಬಗ್ಗೆ. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈಗಾಗಲೇ ಇರುವ ಪಠ್ಯಕ್ರಮಗಳಲ್ಲಿ ಜಾನಪದ ವಿಷಯವು ಇರುವುದರಿಂದ ಹಾಗೂ ಜಾನಪದ ವಿಷಯಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾನಿಲಯವೂ ಇರುವುದರಿಂದ ಜಾನಪದ ವಿಷಯದ ಐಚ್ಛಿಕ ಪತ್ರಿಕೆಯನ್ನು ಅಳವಡಿಸುವ ಅಗತ್ಯವಿರುವುದಿಲ್ಲ ಎಂದು ಸಭೆಯು ಒಮ್ಮತದಿಂದ ನಿರ್ಧರಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 16 | 2019–20.ಸಾ.ವಿ.ವಿ.ಪ.03 ಶೈ.ವಿಭಾಗ–14 | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ. ಕೋರ್ಸ್‌ನ ವಿನಿಯಮದ ಕುರಿತು. | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ. ಕೋರ್ಸ್‌ನ್ನು ಪ್ರಾರಂಭಿಸಲು ಸರ್ಕಾರವು ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರುವ ಕೆಲವು ಕಾಲೇಜುಗಳನ್ನು ಗುರುತಿಸಿರುವುದನ್ನು ಹಾಗೂ ಈ ಸಂಬಂಧ ವಿನಿಯಮವನ್ನು ಸಿದ್ದಪಡಿಸಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ. ಕೋರ್ಸ್‌ನ್ನು ಪ್ರಾರಂಭಿಸಲು ಸರ್ಕಾರದಿಂದ ಬಂದಿರುವ ವಿನಿಯಮವನ್ನು ಅನುಮೋದಿಸಬಹುದೆಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| ಸಂಶೋಧನಾ ವಿಭಾಗ | | | |
|---|---|---|---|
| 17 | 2019–20.ಸಾ.ವಿ.ವಿ.ಪ.03 ಪಿಹೆಚ್.ಡಿ. ವಿಭಾಗ–01 | 2012–13ನೇ ಸಾಲಿನ ಸಂಶೋಧನಾರ್ಥಿಗಳು ಏಳು ವರ್ಷ ಹಾಗೂ ದಂಡಶುಲ್ಕದೊಂದಿಗೆ ಅನಿವಾರ್ಯ ಪರಿಸ್ಥಿತಿಯೆಂದು ಆರು ತಿಂಗಳ ಹೆಚ್ಚುವರಿ ಅವಕಾಶ ನೀಡಿದ್ದರೂ, ಮಹಾಪ್ರಬಂಧ ಸಲ್ಲಿಸದಿರುವ ಕುರಿತು. | 2012–13ನೇ ಸಾಲಿನ ಸಂಶೋಧನಾರ್ಥಿಗಳಿಗೆ ಸಂಬಂಧಿಸಿದಂತೆ, ಕೆಲವು ಸಂಶೋಧನಾರ್ಥಿಗಳು ಗರಿಷ್ಠ ಏಳು ವರ್ಷ ಅವಧಿ ಮುಗಿದಿದ್ದರೂ, ಹೆಚ್ಚಿನ ಸಂಶೋಧನಾರ್ಥಿಗಳ ಮಾರ್ಗದರ್ಶಕರು ತುಮಕೂರು ವಿಶ್ವವಿದ್ಯಾನಿಲಯದ ಹೊರಗೆ ಇರುವ ಸಂಶೋಧನಾ ಕೇಂದ್ರದಲ್ಲಿ ಇದ್ದರಿಂದ ಸಂಶೋಧನಾರ್ಥಿಗಳ ಹಿತದೃಷ್ಠಿಯಿಂದ ಹೆಚ್ಚುವರಿ 06 ತಿಂಗಳಿಗೆ ದಂಡಶುಲ್ಕದೊಂದಿಗೆ ಅನಿವಾರ್ಯ ಪರಿಸ್ಥಿತಿಯೆಂದು ಪರಿಗಣಿಸಿ ಮಹಾಪ್ರಬಂಧ ಸಲ್ಲಿಸಲು ಅವಕಾಶ ನೀಡಿದ್ದರೂ ಸಹ ಹಲವು ಸಂಶೋಧನಾರ್ಥಿಗಳು ಮಹಾ ಪ್ರಭಂಧವನ್ನು ಮಂಡಿಸಲು ಕಾಲಾವಕಾಶ ನೀಡಬೇಕೆಂದು ಕೋರಿರುವುದನ್ನು ಸಭೆಯ ಗಮನಕ್ಕೆ ತಂದರು. ಸಂಶೋಧನೆಗೆ ಸಂಬಂಧಿಸಿದ ಸಭೆಗಳನ್ನು ಹಾಗೂ Colloquium ಗಳನ್ನು ಆನ್‌ಲೈನ್ ಮುಖಾಂತರ ನಡೆಸಲು, ನಿಗಧಿತ ದಿನಾಂಕದೊಳಗೆ (ದಿನಾಂಕ 02.05.2020) ಮಹಾ ಪ್ರಬಂಧದ Soft Copy ಸಲ್ಲಿಸಲು ಮತ್ತು Hard copy ಯನ್ನು ಸಲ್ಲಿಸಲು ಲಾಕ್‌ಡೌನ್ ಮುಗಿದ ನಂತರ 15 ದಿನಗಳ ಕಾಲಾವಕಾಶ ನೀಡಿರುವುದನ್ನು ಸಭೆಯು ಗಮನಿಸಿತು. ವಿಶ್ವವಿದ್ಯಾನಿಲಯವು ದಿನಾಂಕ 02.05.2020 ರೊಳಗೆ ಮಹಾ ಪ್ರಬಂಧವನ್ನು ಸಲ್ಲಿಸಬೇಕು ಎಂದು ಸುತ್ತೋಲೆ ಹೊರಡಿಸಿರುವ ಹಿನ್ನಲೆಯಲ್ಲಿ ಕೇವಲ 04 ಸಂಶೋಧನಾರ್ಥಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಂಶೋಧನಾರ್ಥಿಗಳು ಮಹಾ ಪ್ರಬಂಧವನ್ನು ಸಲ್ಲಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸಭೆಯು ವಿಶ್ವವಿದ್ಯಾನಿಲಯದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿತು. ಗರಿಷ್ಠ ಅವಧಿಯ ನಂತರ 06 ತಿಂಗಳುಗಳ ಹೆಚ್ಚುವರಿ ಅವಧಿಯ ಅವಕಾಶ ನೀಡಿದ್ದರೂ ಕೆಲವು ಸಂಶೋಧನಾರ್ಥಿಗಳು ನಿಗಧಿತ ಅವಧಿಯಲ್ಲಿ ಮಹಾ ಪ್ರಬಂಧವನ್ನು ಸಲ್ಲಿಸದಿರುವುದಕ್ಕೆ ಕಳವಳ ವ್ಯಕ್ತಿಪಡಿಸಿ, ಇಂತಹ ಮೃದು ದೋರಣೆ ನೀಡಿದರೆ ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗುತ್ತದೆ ಹಾಗಾಗಿ ಅವಧಿ ವಿಸ್ತರಿಸ ಬಾರದೆಂದು ಕೆಲವು |

| | | | |
|---|---|---|---|
| | | | ಸದಸ್ಯರುಗಳು ಸಲಹೆ ನೀಡಿದರು. ಕೊನೆಗೆ ಒಟ್ಟಾರೆ ಸಂಶೋಧನಾರ್ಥಿಗಳ, ಹಿತದೃಷ್ಟಿಯಿಂದ ಹಾಗೂ ವಿಶ್ವವಿದ್ಯಾನಿಲಯದ ಗುಣಮಟ್ಟಕ್ಕೆ ಧಕ್ಕೆಯಾಗದಂತೆ ಸದರಿ ವಿಷಯದ ಬಗ್ಗೆ ಕೂಲಕಂಷವಾಗಿ ಚರ್ಚಿಸಿದ ಸಭೆಯು 2012–13 ವರ್ಷದ ಸಂಶೋಧನಾರ್ಥಿಗಳಿಗೆ ಸದರಿಯವರುಗಳ ಅವಧಿ ಮುಗಿದ ದಿನಾಂಕದಿಂದ ಅನ್ವಯವಾಗುವಂತೆ ಪ್ರತಿ ತಿಂಗಳಿಗೆ ರೂ. 10,000/– ದಂಡ ಶುಲ್ಕದಂತೆ (ಗರಿಷ್ಠ 6 ತಿಂಗಳು ಮಾತ್ರ) ಅವಧಿಯನ್ನು ವಿಸ್ತರಿಸುವಂತೆ ಹಾಗೂ ಇನ್ನುಮುಂದೆ ಯಾವುದೇ ಕಾರಣಕ್ಕೂ ಅವಧಿಯನ್ನು ವಿಸ್ತರಿಸಬಾರದೆಂದು ಸಭೆಯು ಒಮ್ಮತದಿಂದ ತೀರ್ಮಾನಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 18 | 2019–20.ಸಾ.ವಿ.ವಿ.ಪ.03 ಪಿಹೆಚ್.ಡಿ. ವಿಭಾಗ–02 | 2013–14ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ. ಸಂಶೋಧನೆಯ ಅವಧಿಯು ಗರಿಷ್ಠ ಏಳು ವರ್ಷಗಳು (6+1) ಮುಗಿಯುವ ಹಂತದಲ್ಲಿದ್ದು, ಕೆಲವು ಸಂಶೋಧನಾರ್ಥಿಗಳು ಮಹಾಪ್ರಬಂಧ (Soft Copy) ಸಲ್ಲಿಸುವ ಪ್ರಕ್ರಿಯೆ ಅಪರಿಪೂರ್ಣವಾಗಿರುವ ಕುರಿತು. | 2013–14ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ. ಸಂಶೋಧನೆಯ ಅವಧಿಯು ಗರಿಷ್ಠ ಏಳು ವರ್ಷಗಳು (6+1) ದಿನಾಂಕ 17.05.2020 ರಂದು ಮುಗಿದಿರುತ್ತದೆ. ಆದರೂ ಸಹ ಹಲವು ಸಂಶೋಧನಾರ್ಥಿಗಳು ಮಹಾ ಪ್ರಭಂಧವನ್ನು ಮಂಡಿಸಲು ಕಾಲಾವಕಾಶ ನೀಡಬೇಕೆಂದು ಕೋರಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಹಲವು ಸಂಶೋಧನಾರ್ಥಿಗಳ ಮಾರ್ಗದರ್ಶಕರು ತುಮಕೂರು ವಿಶ್ವವಿದ್ಯಾನಿಲಯದ ಅಧ್ಯಾಪಕರೇ ಆಗಿದ್ದು, 2012–13ರ ಸಂಶೋಧನಾರ್ಥಿಗಳಿಗೆ ನೀಡಿರುವ ವಿಸ್ತರಣೆಯನ್ನು ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಹಾಗೂ ಕೆಲವು ಸಂಶೋಧನಾರ್ಥಿಗಳು ಏಳು ವರ್ಷಗಳ ಕಾಲಾವಧಿಯಲ್ಲಿ ನಿಯಮಾನುಸಾರ ಎರಡು ಸಂಶೋಧನಾ ಪ್ರಬಂಧವನ್ನು ಪ್ರಕಟಿಸದಿರುವುದನ್ನು ಗಮನಕ್ಕೆ ತಂದರು. ಸಂಶೋಧನೆಗೆ ಸಂಬಂಧಿಸಿದ ಸಭೆಗಳನ್ನು ಹಾಗೂ Colloquium ಗಳನ್ನು ಆನ್‌ಲೈನ್ ಮುಖಾಂತರ ನಡೆಸಲು, ನಿಗದಿತ ದಿನಾಂಕದೊಳಗೆ ಮಹಾ ಪ್ರಬಂಧದ Soft Copy ಸಲ್ಲಿಸಲು ಮತ್ತು Hard copy ಯನ್ನು ಸಲ್ಲಿಸಲು ಲಾಕ್‌ಡೌನ್ ಮುಗಿದ ನಂತರ 15 ದಿನಗಳ ಕಾಲಾವಕಾಶ ನೀಡಿರುವುದನ್ನು ಸಭೆಯು ಗಮನಿಸಿತು. ವಿಶ್ವವಿದ್ಯಾನಿಲಯವು ದಿನಾಂಕ 17.05.2020 ರೊಳಗೆ ಮಹಾ ಪ್ರಬಂಧವನ್ನು ಸಲ್ಲಿಸಬೇಕು ಎಂದು ಸುತ್ತೋಲೆ |

| | | | |
|---|---|---|---|
| | | | ಹೊರಡಿಸಿರುವ ಹಿನ್ನಲೆಯಲ್ಲಿ ಬಾಕಿ ಉಳಿದಿದ್ದ 87 ವಿದ್ಯಾರ್ಥಿಗಳಲ್ಲಿ 53 ವಿದ್ಯಾರ್ಥಿಗಳು ಮಹಾ ಪ್ರಬಂಧವನ್ನು ಸಲ್ಲಿಸಿರುವುದು ಗಮನಾರ್ಹ ಎಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸಭೆಯು ವಿಶ್ವವಿದ್ಯಾನಿಲಯದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿತು. ಗರಿಷ್ಠ ಅವಧಿಯನ್ನು ನೀಡಿದ್ದರೂ ಕೆಲವು ಸಂಶೋಧನಾರ್ಥಿಗಳು ನಿಗಧಿತ ಅವಧಿಯಲ್ಲಿ ಮಹಾ ಪ್ರಬಂಧವನ್ನು ಸಲ್ಲಿಸದಿರುವುದಕ್ಕೆ ಕಳವಳ ವ್ಯಕ್ತಿಪಡಿಸಿ, ಇಂತಹ ಮೃದು ದೋರಣೆ ನೀಡಿದರೆ ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗುತ್ತದೆ ಹಾಗಾಗಿ ಅವಧಿ ವಿಸ್ತರಿಸ ಬಾರದೆಂದು ಕೆಲವು ಸದಸ್ಯರುಗಳು ಸಲಹೆ ನೀಡಿದರು. ಕೊನೆಗೆ ಒಟ್ಟಾರೆ ಸಂಶೋಧನಾರ್ಥಿಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಗುಣಮಟ್ಟಕ್ಕೆ ಧಕ್ಕೆಯಾಗದಂತೆ ಸದರಿ ವಿಷಯದ ಬಗ್ಗೆ ಕೂಲಕಂಷವಾಗಿ ಚರ್ಚಿಸಿದ ಸಭೆಯು 2013-14ನೇ ವರ್ಷದ ಸಂಶೋಧನಾರ್ಥಿಗಳಿಗೆ ಸದರಿಯವರುಗಳ ಅವಧಿ ಮುಗಿದ ದಿನಾಂಕದಿಂದ ಅನ್ವಯವಾಗುವಂತೆ ಪ್ರತಿ ತಿಂಗಳಿಗೆ ರೂ. 10,000/- ದಂಡ ಶುಲ್ಕದಂತೆ (ಗರಿಷ್ಠ 6 ತಿಂಗಳು ಮಾತ್ರ) ಅವಧಿಯನ್ನು ವಿಸ್ತರಿಸುವಂತೆ ಹಾಗೂ ಇನ್ನುಮುಂದೆ ಯಾವುದೇ ಕಾರಣಕ್ಕೂ ಅವಧಿಯನ್ನು ವಿಸ್ತರಿಸಬಾರದೆಂದು ಸಭೆಯು ಒಮ್ಮತದಿಂದ ತೀರ್ಮಾನಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ಕಾರ್ಯಸೂಚಿ**

**ಹಣಕಾಸು ವಿಭಾಗ**

2020-21ನೇ ವಿಶ್ವವಿದ್ಯಾನಿಲಯದ ಅಂದಾಜು ಆಯವ್ಯಯವನ್ನು ಸಿದ್ಧಪಡಿಸಿರುವ ಬಗ್ಗೆ ಹಾಗೂ ಸಿದ್ಧಪಡಿಸಿರುವ ಸದರಿ ಆಯವ್ಯಯದಲ್ಲಿ ಸೇರಿಸಲಾಗಿರುವ Item wise receipt (ಅಂದಾಜು ಆದಾಯ ರೂ. 12,995.48 ಲಕ್ಷಗಳು) ಮತ್ತು Details of Expenditure (ಅಂದಾಜು ವೆಚ್ಚಗಳು ರೂ. 12,982.14 ಲಕ್ಷಗಳು) ಗಳ ಬಗ್ಗೆ ಸವಿಸ್ತಾರವಾಗಿ ಹಣಕಾಸು ಅಧಿಕಾರಿಯವರು ಸಭೆಯ ಗಮನಕ್ಕೆ ತಂದರು. ಹಾಗೂ ಸದರಿ ಆಯವ್ಯಯವನ್ನು ದಿನಾಂಕ 12.05.2020 ರಂದು ಪರಿಚಲನೆ ಮೂಲಕ ಹಣಕಾಸು ಸಮಿತಿಯಲ್ಲಿ ಅನುಮೋದನೆ ಆಗಿರುವುದನ್ನು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಕೂಲಕಂಷವಾಗಿ ಚರ್ಚಿಸಿದ ಸಭೆಯು 2020-21ನೇ ಸಾಲಿನ ಅಂದಾಜು ಆಯವ್ಯಯವನ್ನು ಒಪ್ಪಬಹುದು ಎಂದು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.